181 (2)

Regd B G No. 155

— ೩೯ —

8—9—1962

Sri "SATYAVADI"
— DAILY —
MYSORE 4
47 th Year
೪೯ ವರ್ಷ

ಸತ್ಯವಾದಿ

ಸ್ಥಾಪಕರು— ಅರಮನೆ ಸಿಂಹ್ಮೇದಾರ್ ಎಂ. ವಿ. ಸುಬ್ಬರಾಯುರು 2 ನ ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಯನ್ನು ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow
ಗೋಸಂರಕ್ಷಣೆ ಮಾಡಿ

ಹರತಾಳ

ಸಿದ್ದಿ 7— ಆಹಾರ ಧಾನ್ಯಗಳ ಮೇಲೆ ಮೂರಾಟಕರ ವಿಧಿಸಬೇಕೆಂದಿರುವ ಸರ್ಕಾರಿ ಯೋಜನೆ ಪ್ರತಿಭಟಿಸಿ ಕುಮಟ ಹೊನ್ನಾವರ, ಅಂಕೋಲ, ಭಟ್ಕಳ, ಸಿದ್ದಾಪುರ ವರ್ತಕರು ಹರತಾಳ ನಡೆಸಿದರು — ಎಲ್ಲಾ ತಾಲ್ಲೂಕು ವರ್ತಕ ಸಂಘಗಳೂ ಆಹಾರಧಾನ್ಯಗಳ ಮೇಲೆ ಮೂರಾಟ ತೆರಿಗೆ ಹಾಕಬಾರದೆಂದು ಸರಕಾರವನ್ನು ವಿನಂತಿಸಬೇಕೆಂದು ನಿರ್ಣಯಿಸಲಾಯಿತು.

ಲಂಡನ್ 7— ಲಡಕ್ಕಿನ ಅಕ್ಸಾಯ್ ಚಿನ್ ಭಾಗವು ಭಾರತಕ್ಕೆ ಸೇರಿದುದೇ ಆಗಿರುವುದೆಂದು ಯೂರೋಪಿನ ಕಾಶ್ಮೀರ ಅಸೋಸಿಯೇಷನ್ನಿನ ಅಧ್ಯಕ್ಷ ಶ್ರೀ ಜುಟ್ಟಿ ಹೇಳಿರುವರು.

ಪೀಕಿಂಗ್ 7— ಗಡಿ ವ್ಯಾಜ್ಯದ ಬಗ್ಗೆ ಮಾತುಕತೆಗೆ ಭಾರತ ಹಾಕಿರುವ ಪೂರ್ವ ನಿಬಂಧನೆಗಳು ಚೀನಿ ಜನತೆಯಿಂದ ಒಪ್ಪಿಕೊಳ್ಳಲು ಖಂಡಿತ ಸಾಧ್ಯವಿಲ್ಲವೆಂದು ಚೀನಾ ಕಮ್ಯೂನಿಸ್ಟ್ ಪಾರ್ಟಿಯ 'ಪೀಪಲ್ಸ್ ಡೇಲಿ' ಪ್ರಕಟಿಸಿದೆ.

ಜಕರ್ತಾ 7— ಅಧ್ಯಕ್ಷ ಸೊಕರ್ನೊರಿಗೆ ಭಾರತ ರಾಯಭಾರಿ ಶ್ರೀ ಪಂಕಜ್ ಮಹಾಭಾರತದ ಪ್ರತಿ ಕೊಟ್ಟರು.

ಶಾಸನಸಭೆಯಲ್ಲಿ

ಬೆಂಗಳೂರು 7— ಮೈಸೂರು ಹುಣಸೂರಿನ ರಂಜನ ತೆರಿಗೆ (ಸಂಚಾರ್ಜ್) ಮೈಸೂಡೆಯು ಶಾಸನ ಸಭೆಯಲ್ಲಿ ಮಂಡಿಸಿದಾಗ ವಿರೋಧ ಪಕ್ಷದವರು ಸರಕಾರ ಹತೋಟಿಯಿಲ್ಲದ ದುಂದು ಖರ್ಚಿನ ವಿಷಯವಾಗಿ ಟೀಕಿಸಿದರು — ವಿತ್ತಸ್ಥಾಯಿ ಸಮಿತಿ ಸೂಚಿಸಿದ ರಾಜ್ಯದಲ್ಲಿ ಎಂಟು ಮಂತ್ರಿಗಳು ಸಾಕೆಂಬ ಸಲಹೆ ಇನಾಯಿತೆಂದರು — ಸರಕಾರ ತೆರಿಗೆ ಕಸ್ಪಿಸಿಕೊಳ್ಳುವನ್ನು ರಕ್ಷಿಸುವದೆಂದು ಶ್ರೀ ಮುಕ್ಕಣ್ಣಪ್ಪ ಹೇಳಿ, ಒಡಳಿತ ಪಕ್ಷಕ್ಕೆ ಸೇರಿದ ಒಬ್ಬ ಪ್ರಮುಖ ವ್ಯಾಪಾರಸ್ಥರ ಮನೆಯನ್ನು ಸಿ ಐ ಡಿ ಯವರು ತನಿಖೆ ಮಾಡಿದಾಗ ಅಲ್ಲಿ 70 ಲಕ್ಷ ರೂಪಾಯ್ಗಿ 30 ಲಕ್ಷ ರೂಗಳಷ್ಟು ಶೇಖರಿಸಲ್ಪಟ್ಟಿದ್ದ ಸಂಪತ್ತನ್ನು ಹಿಡಿದ ವಿಷಯ ತಿಳಿಸಿದರು — ಪ್ರವಾಹ ದೃಶ್ಯ ನೋಡಲು ಎಂದು ಮಂದಿ ಮಂದಿ ಮಂತ್ರಿಗಳು ಹೋದುದನ್ನು ಶ್ರೀ ಶಿವಪ್ಪನವರು ಅಲ್ಲಗಳೆದರು : ಈ ಐದು ವರ್ಷಗಳಲ್ಲಿ ಒಬ್ಬ ಉಪಸಚಿವರು 75 ಸಾವಿರ ಪ್ರಯಾಣ ಭತ್ಯೆ ಪಡೆದಿರುವರೆಂದರು

★ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ 227990 ಪ್ರಚಾರ ಹೊಂದಿದ್ದು ದೇಶದಲ್ಲೇ ಅತಿ ಹೆಚ್ಚು ಪ್ರಸಾರದ ದಿನಪತ್ರಿಕೆಯಾಗಿದೆ.

ಅಣುಕಿರಣದ ರಕ್ಷಣಾಶಾಲೆ

ಪ್ರಬಲ ರಾಷ್ಟ್ರಗಳು ತಮ್ಮ ಶಕ್ತಿಯನ್ನು ವರ್ಧಿಸಿಕೊಳ್ಳಲು ಆಗಿಂದಾಗ್ಗೆ ಅಣ್ವಸ್ತ್ರಗಳ ಪ್ರಯೋಗಗಳನ್ನು ನಡೆಸುತ್ತಲೇ ಇವೆ : ಇದರಿಂದ ವಾತಾವರಣವು ಕಲುಷಿತಗೊಂಡು, ಪ್ರಯೋಗ ನಡೆದ ಪ್ರದೇಶದವರು ಅಣುಭಸ್ಮಧಾಳಿ ನಡೆದಾಗ ಹೇಗೆ ನಡೆದುಕೊಳ್ಳಬೇಕು, ಇದರಿಂದ ಉಂಟಾಗಬಹುದಾದ ಅಪಘಾತವನ್ನು ಉಂಟಾಗದಂತೆ ತಡೆಗಟ್ಟಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಶಿಕ್ಷಣ ನೀಡಲು ಇಡೀ ಯೂರೋಪಿನಲ್ಲೆ ಒಂದಾದ ಶಾಲೆಯನ್ನು ವಾರ್ಸಾನಿಜ್ಜೆಯಲ್ಲಿ ತೆರೆಯಲಾಗಿದೆ — ಈ ಶಾಲೆಯಲ್ಲಿ ಸಿದ್ಧ ಮೂರು ಸಹಸ್ರ ಮಂದಿಗೆ ಶಿಕ್ಷಣ ನೀಡಲಾಗಿದೆ : ಇವರಲ್ಲಿ ಕೆಲವರಿಗೆ ಒಂದು ಕಾಲದ ಶಿಕ್ಷಣವನ್ನೂ ನೀಡಲಾಗಿದ್ದು, ಅಂತಹವರನ್ನು ಅಣುಯುಗದ ಶಿಕ್ಷಕಾವರ್ಗದವರು ಎಂದು ಕರೆಯಲಾಗಿದೆ — ಅಣುಶಕ್ತಿಯು ಉಪಯೋಗವು ಎಷ್ಟು ಕ್ಷೇಮವಾಗಿಗೂ ಹಾನಿದಂತೆ, ವಿಮಾನಸಂಚಾರ, ಹಡಗುಗಳ ಜಲಯಾನ, ತೈಲಸಂಸ್ಕರಣಾಗಾರ ಹಿಡಿತ, ಮುಂತಾದುವೆಲ್ಲವೂ ಇದನ್ನು ಬಳಸಿಕೊಳ್ಳಲಾಗಿದೆ [illegible] ಗೊಳ್ಳುತ್ತಿರುವ ಈ ಕಾಲದಲ್ಲಿ ಅಣು[illegible] ಅವಶ್ಯೋಚಿತವಾಗಿದೆ.

(ಯು[illegible]

ರಾಜ್ಯಗಳಲ್ಲಿ ಭೂಕಂದಾಯ ಶೀಘ್ರ ಹೆಚ್ಚಿಸುವ ವಿಷಯ ಆಳವಾಗಿ ಪರಾಲೋಚಿಸತಕ್ಕದು

— ಪಂ॥ ನೆಹರು

ನವದೆಹಲಿ 7— ಕೆಲವು ರಾಜ್ಯಗಳಲ್ಲಿ ಭೂಕಂದಾಯ ಹೆಚ್ಚಿಸುವ ಶಾಸನ ಮಾಡುತ್ತಿರುವ ಬಗ್ಗೆ ಕೆಂಪೂಸಲು ಮಿಕ್ಕು ಅಕಾಂಕ್ಷೆ ಹೆಚ್ಚುತ್ತಿರುವುದರಿಂದ, ಈ ವಿಷಯವನ್ನು ಪ್ರತಿನಿಧಿಗಳ ಸಮಿತಿಗೆ ಸಂಪೂರ್ಣವಾಗಿ ಪರ್ಯಾಲೋಚಿಸಿ ಸರಕಾರಕ್ಕೆ ತಿಳಿವಳಿಕೆ ಕೊಡುವಂತೆ ಕೇಂದ್ರ ಸರಕಾರವು ತಿಳಿಸಿದೆಯೆಂದು ಪಂ॥ ನೆಹರು ಲೋಕಸಭೆಯಲ್ಲಿ ತಿಳಿಸಿದರು — ಈ ವಿಷಯ ಆಳವಾದ ಪರ್ಯಾಲೋಚನೆ ಅವಶ್ಯಕವೆಂದರು.

ನೇತಾಜಿ ಕಥೆ

ನವದೆಹಲಿ 7— ಸೋಲವಾರ ಅಶ್ರಮದಲ್ಲಿರುವ ಶಾರದಾನಂದಜೀಯವರು ನೇತಾಜಿಯವರಲ್ಲವೆಂದು ಪಶ್ಚಿಮ ಬಂಗಾಳ ಸರಕಾರದ ಅಭಿಪ್ರಾಯವಾಗಿದೆ — ನೇತಾಜಿಯ ಸೋದರಳಿಯರೊಬ್ಬರು ಅಲ್ಲಿಗೆ ಭೇಟಿಕೊಟ್ಟಿದ್ದರು, ಅವರು ನೇತಾಜಿಯಲ್ಲವೆಂಬುದನ್ನು ಅನುಮೋದಿಸಿರುವರೆಂದು ಮುಖ್ಯ ಮಂತ್ರಿ ಸೇ ಹೇಳಿರುವರು — ನೇತಾಜಿ ಶಿಷ್ಯರೊಬ್ಬರಿಂದ ಜೀರೆ ಕಥೆ ಕೇಳಿರುವುದಾಗಿಯೂ ಹೇಳಿದರು — ಶ್ರದ್ಧಾನಂದಜಿ ನೇತಾಜಿಯಲ್ಲವಾದರೂ ಆ ಆಶ್ರಮದಲ್ಲಿ ಬೇರೊಬ್ಬ ಸಾಧುವಿದ್ದು ಅವರು ನೇತಾಜಿಯಾಗಿದ್ದು ಅವರನ್ನು ಯಾರೂ ನೋಡಿಲ್ಲವೆಂದು ಹೇಳಿದರು ಎಂದಿರುವರು.

★

ರಾಜ್ಯದ ಹೆಸರು

ಬೆಂಗಳೂರು 7— ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಬೇಕೆಂದೂ, ಕನ್ನಡ ಭಾಷೆಯನ್ನು ರಾಜ್ಯಭಾಷೆಯಾಗಿ ಮಾಡಬೇಕೆಂದೂ ಕನ್ನಡ ಕಾರ್ಯಕರ್ತರ ಸಂಘದವರು ಪ್ರದರ್ಶನ ನಡೆಸಿದರು — ರಂಗದ ನಾಯಕರು ಮುಖ್ಯ ಮಂತ್ರಿಗಳನ್ನು ಸಂದರ್ಶಿಸಿದರು — ರಾಜ್ಯದ ಹೆಸರನ್ನು ಕರ್ನಾಟಕ ಎಂದಿಡುವ ನಿರ್ಣಯವು ಈ ಅಧಿವೇಶನದಲ್ಲಿ ಬರುವ ಸಂಭವವಿದೆಯೆಂದು ಮುಖ್ಯ ಮಂತ್ರಿಗಳು ತಿಳಿಸಿದಂತೆ ವರದಿಯಾಗಿದೆ.

ನಾಳೆಯ ಪಂಚಾಂಗ

ಆಸ್ಥಾನ ವಿದ್ವಾನ್ ಧರ್ಮಾಧಿಕಾರಿ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

ಭಾನುವಾರ ದಶಮಿ ಪೂರ್ವಾಷಾಢ

"ನೈಟ್ ಅವರ್ಸ್ ಟು ರಾಮು" ಪ್ರತಿಬಂಧಿಸಲ್ಪಟ್ಟಿತು

ಬೊಂಬಾಯಿ 7— ಅಮೇರಿಕಾ ಪ್ರೊಫೆಸರು ಸ್ಟಾನ್ಲೆಪೊಲ್ಟ್ ಬರೆದಿರುವ ಮಹಾತ್ಮಾ ಗಾಂಧೀಜಿ ಕೊಲೆ ಮುಖ್ಯ ಗಡಸಿನ ನಾಥೂರಾಂ ಗೋಡ್ಸೆಯವರ ವಿಷಯದ ಪುಸ್ತಕ 'ನೈಟ್ ಅವರ್ಸ್ ಟು ರಾಮಾ' ಅನುವಾದವನ್ನು ಭಾರತ ಸರಕಾರ ಪ್ರತಿಬಂಧಿಸಿದೆ — ಈ ವಿಷಯದ ಫಿಲ್ಮ್‌ನ್ನು ಪ್ರತಿಬಂಧಿಸಬೇಕೆಂದೂ ಈಚೆಗೆ ಪೂನಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಬಲಯುತವಾದ ಕೇಳಿಕೆ ಮಾಡಲಾಯಿತು — ವಿಾಟಂಗಿನಲ್ಲಿ ಪುಸ್ತಕದ ಪ್ರತಿಯೊಂದು ಸುಡಲ್ಪಟ್ಟಿತೆಂದೂ ವರದಿಯಾಗಿದೆ.

★ ಲಂಡನ್ 7— ಚೀನವು ತಾನೆ ಬರ್ಮಾದಿಂದ ಕೊಂಡಿದ್ದ 1 ಲಕ್ಷ ಟನ್ ಅಕ್ಕಿಯನ್ನು ಅಹಕಾರಾಭಾವದಿಂದ ಸರಬರಾಜು ಮಾಡುತ್ತಿರುವ ಇಂಡೋನೇಷಿಯಾಕ್ಕೆ ಉದಾರವಾಗಿ ದಾನ ಮಾಡಿತು

ಪ. ಜರ್ಮನಿ ವಿದ್ಯಾರ್ಥಿ ನಿಲಯಗಳಲ್ಲಿ ಭಾರತೀಯರು

ಕೀಲ್ ('ಡಾಡ್')— ಪಶ್ಚಿಮ ಜರ್ಮನಿಯಲ್ಲಿರುವ ವಿದ್ಯಾರ್ಥಿ ಸಂಘಗಳ ಕೇಂದ್ರ ಕಛೇರಿಯು ಹೊಂಡಿಸಿರುವ ಪ್ರಕಟಣೆಯಿಂದ, 1962 ರಲ್ಲಿ ಅಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿ 3276 ಭಾರತೀಯರೂ, 1045 ಜಪಾನೀಯರೂ ಇದ್ದಾರೆಂದು ತಿಳಿಯಬರುತ್ತದೆ : ಜರ್ಮನಿಗೆ ಹೆಚ್ಚು ವಿದ್ಯಾರ್ಥಿಗಳನ್ನು ಕಳಿಸುವ ವಿಚಾರದಲ್ಲಿ ಅಮೆರಿಕಾ, ಕೆನಡಾ, ಭಾರತ ಜಪಾನುಗಳು ಕ್ರಮವಾಗಿ ಮೊದಲ ನಾಲ್ಕು ಸ್ಥಾನಗಳನ್ನು ಪಡೆದಿವೆ. ಬಾಕಿ ನಗರಗಳಿಗಿಂತ ಫ್ರಾಂಕಫರ್ಟ್, ಮ್ಯೂನಿಚ್ ಮತ್ತು ಹ್ಯಾಂಬರ್ಗ್‌ಗಳಲ್ಲಿರುವ ವಿದ್ಯಾರ್ಥಿನಿಲಯಗಳಲ್ಲಿಯೇ ಹೆಚ್ಚು ಸಂಖ್ಯೆಯಲ್ಲಿ ಭಾರತೀಯರು ತಂಗಿದ್ದರು ; ವರ್ಷೇವರ್ಷೇ ಹೊರದೇಶಗಳಿಂದ ಜರ್ಮನಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಿದ್ದು ಅಲ್ಲಿನವಿದ್ಯಾರ್ಥಿನಿಲಯಗಳಿಗೆ ಅತಿ ಹೆಚ್ಚಿನ ಗಿರಾಕಿ ಇದೆ.

o o o o

ಸ್ತ್ರೀಪುರುಷರ ಸಮಾನಸ್ಥಾನ

ಸ್ತ್ರೀಯಂನ್ನು ಕೀಳಾಗಿಯೂ, ಕಾಲುಕೆಳಗಿನ ಕಸದಂತೆಯೂ ಕಾಣುವುದು ಅನಾಗರಿಕ ಲಕ್ಷಣವೆಂದೂ, ಹೆಣ್ಣಿಗೆ ಗಂಡಿನ ಸರಿಸಮಾನವಾದ ಸ್ಥಾನ ದೊರಕಬೇಕೆಂದೂ ಲೋಕದ ಹಿರಿಯ ಜ್ಞಾನಿಗಳೆಲ್ಲಾ ಹೇಳುತ್ತಲೇ ಬಂದಿದ್ದಾರೆ ; ಆದರೆ ಮಾತಿಗೆ ಈಗ ತಾನೇ ಬೆಲೆ ಸಿಕ್ಕುತ್ತಿದೆ ; ಆದರಲ್ಲೂ ಸ್ತ್ರೀಪುರುಷರಲ್ಲಿನ ಭೇದವು ಪಶ್ಚಿಮ ಜರ್ಮನಿಯಲ್ಲಿ ಸಂಪೂರ್ಣವಾಗಿ ನಶಿಸಿಹೋಗಿದೆ : ಅಲ್ಲಿನ ಉದ್ಯೋಗಕ್ಷೇತ್ರದಲ್ಲಿ ಐದನೆಯ ಒಂದು ಭಾಗದಷ್ಟು ಮಹಿಳೆಯರೇ ಇದ್ದಾರೆ — ಯಾವ ಕ್ಷೇತ್ರದಲ್ಲಿ ಅನಾದಿ ಕಾಲದಿಂದ ಗಂಡಸರೇ ರಾಜ್ಯವಾಳಿಕೊಂಡು ಬಂದಿದ್ದರೋ ಆ ಕ್ಷೇತ್ರದಲ್ಲಿ ಹೆಂಗಸರೂ ಪೂರ್ಣೋತ್ಸಾಹದಿಂದ ಪದಾರ್ಪಣ ಮಾಡಿ, ಗಂಡಸರಿಂದಲೂ ಸೈ ಎನ್ನಿಸಿಕೊಂಡಿದ್ದಾರೆ — ಪಶ್ಚಿಮ ಜರ್ಮನಿಯಲ್ಲಿ 30 ಲಕ್ಷ ಮಂದಿ ಗಂಡಸರು ಸ್ತ್ರೀಯರ ಕೈಕೆಳಗೆ ಕೆಲಸಮಾಡುತ್ತಿದ್ದಾರೆಂದು ಅಂಕಿಅಂಶಗಳು ಸಿಕ್ಕಿದಾಗ 1954 ರಲ್ಲಿ ಸ್ತ್ರೀ ಉದ್ಯೋಗಸ್ತರ ಸಂಘವು ತೆರೆಯಲ್ಪಟ್ಟಿತು ; ಈ ಸಂಘದ ಅಧ್ಯಕ್ಷಿಣಿಯಾದ ಶ್ರೀಮತಿ ಕೇತ್ ಆಲ್‌ಮೆರ್ ಎಂಬುವರು ಮೂವತ್ತು ವರ್ಷಗಳಿಂದ ಹಡಗು ತಯಾರಿಕೆಯಲ್ಲಿ ತೊಡಗಿದ್ದು ಮೂರು ಸಹಸ್ರ ಮಂದಿಗೆ ಜೀವನೋಪಾಯ ಕಲ್ಪಿಸಿದ್ದಾರೆ (ಯು. ಪಿ ಎಸ್)

SHAKTI
SUDHA

A Superb Tonic

Help The 'Gorakshana'

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋಕ್ಷಣೆ, ಪಶುಪಾಲನೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವೂಡ್‌ಲಾಂಡ್ಸ್ ಜನೆಭಾತ 2 ನೇ ವಾರ

ನಯಿ ಮಾ (ಹಿಂದಿ) NAI MAA

ಪಾತ್ರ— ಬಾಲರಾಜ್ ಸಹಾನಿ, ಶ್ಯಾಮ, ಡೈಸಿ ಇರಾನಿ, ಪೀಪ್ ಕನಿವಾಲ್

ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಸಾಂಸಾರಿಕ ಚಿತ್ರ

ದಿನವಹಿ 3 ಪ್ರದರ್ಶನಗಳು

ಆಪೆರಾ— 6—9—62 ರಿಂದ

Flight to Assam ಫ್ಲೈಟ್ ಟು ಅಸ್ಸಾಂ

ನಟನಟಿಯರ— ಕಂಜಿತ್, ಶಕಿಲಾ, ಟುಟು, ಸುಜಾತಾ, ಮುದಸ್ಸರ್

ಸಾಹಸಮಯ, ರೋಮಾಂಚಕ, ವಿಮಾನಗಳ ಹಾರಾಟಗಳಿಂದ ಕೂಡಿದ ಚಿತ್ರ

ದಿನ 3 ಆಟಗಳು



ಅಮೋಘಿಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

For Quality Printing ಎಲ್ಲ ವಿಧದ ಲಿಥೋಮುದ್ರಣ ಕಾರ್ಯಗಳಿಗೆ

L. N. Press ಎಲ್. ಎನ್. ಪ್ರೆಸ್

Sivarampet. Mysore ಶಿವರಾಂಪೇಟೆ, ಮೈಸೂರು

Edited, Printed & Published by the Proprietor, Dharmapalachara Nirata Mi[illegible]ha Rao. at the Satyavadi Press, Chamarajapuram, Mysore. 4